# ಕಿರಿಯರ ಕೋರಿಕೆ

■ ವೀರೇಶ ಬ. ಕುರಿ ಸೋಂಪೂರ

ಕಲೆ: ಸಂತೋಷ್ ಸಸಿಹಿತ್ಲು



ನಮ್ಮ ಊರ ಸುತ್ತಮುತ್ತ
ಹತ್ತಾರು ಕಾರ್ಖಾನೆ
ನಿತ್ಯ ಹೊಗೆಯ ಉಗುಳುತ
ಸೃಷ್ಟಿಸಿವೆ ನರಕವನು!

ಅಮ್ಮನಿಗೂ, ತಮ್ಮನಿಗೂ
ನಿಲ್ಲುತ್ತಲೇ ಇಲ್ಲ ಕೆಮ್ಮು
ಮನೆ ಮಂದಿಯೆಲ್ಲರಿಗೂ
ಸೇರಿಕೊಳ್ಳುತ್ತಿದೆ ದಮ್ಮು

ಮನೆ–ಮಠ, ಶಾಲೆ, ಹೊಲ
ಎಲ್ಲೆಡೆಯೂ ಕಪ್ಪು ದೂಳು
ಕುಡಿವ ನೀರು, ಉಣುವ ಅನ್ನ
ವಿಷವಾಯ್ತು ಎಂತಾ ಗೋಳು

ಹಸಿರು ಗಿಡ–ಮರದ ಮೇಲೆ
ವಿಷಾನಿಲದ ಲೀಲೆ!
ಕರಿ ಬೂದಿಯ ಕಾರ್ಮೋಡ
ಹಬ್ಬಿಸಿದೆ ವ್ಯಾಧಿ ಜ್ವಾಲೆ

ಬಾಳಿ ಬದುಕಬೇಕು ನಾವು
ಈ ಮಣ್ಣಲಿ ನೂರು ಕಾಲ
ನೋಡಿರೊಮ್ಮೆ ನಮ್ಮ ಮುಖ
ಕರುಣೆದೋರಿ ತಪ್ಪಿಸಿ ಶೂಲ

ಕೈಯ ಮುಗಿದು ಕೇಳುವೆವು
ಕರುನಾಡಿನ ಹಿರಿಯರಿಗೆ
ಪರಿಸರ ವಿನಾಶಕೆ ಅಂತ್ಯ ಹಾಡಿ
ನಲಿವು ನೀಡಿ ಕಿರಿಯರಿಗೆ ■

## ಕುಂಚ ಪ್ರಪಂಚ



**ವೈಷ್ಣವಿ**
3ನೇ ತರಗತಿ, ದಿ ಮಾತ್ರ ಅಕಾಡೆಮಿ, ಬೆಂಗಳೂರು







**ಸನ್ವಿತ್ ಆರ್‌**
5ನೇ ತರಗತಿ, ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹೊಸನಗರ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in